**ಮೂ.ದಾ.ನಂ. 68/2014**

ಪಿ.ಡಬ್ಲ್ಯು 1

(ಇಂದು ದಿನಾಂಕ: **21-07-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ವಾಯ್.ವಿ.ಎಸ್. ವಕೀಲರಿಂದಃ**

**1.** 1ನೇ ಪ್ರತಿವಾದಿಯು ಅವರ ಜೀವಿತಾವಧಿಯಲ್ಲಿ ಶಿರ್ಶಿಯಲ್ಲಿ ವಾಸ ಇದ್ದರು ಎಂದರೆ ಸರಿ. ಅವರು ಕೆನರಾ ಬ್ಯಾಂಕ ಉದ್ಯೋಗಿ ಎಂದರೆ ಸರಿ. 2ನೇ ಪ್ರತಿವಾದಿಯು ಸಹ ಕೆನರಾ ಬ್ಯಾಂಕನಲ್ಲಿ ಉದ್ಯೋಗದಲ್ಲಿ ಇದ್ದರು ಎಂದರೆ ಸರಿ. 2ನೇ ಪ್ರತಿವಾದಿಗೆ ಅಜಮಾಸು 25 ವರ್ಷದ ಹಿಂದೆ ಅಪಘಾತವಾಗಿತ್ತು ಎಂದರೆ ಸಾಕ್ಷಿಯು Drink and Drive ಆಗಿ ಅಪಘಾತ ಆಗಿರುತ್ತದೆ ಎಂದು ನುಡಿಯುತ್ತಾರೆ. ಇದರಿಂದಾಗಿ ಅವರ ಒಂದು ಕಾಲಿಗೆ ಪೆಟ್ಟಾಗಿ ಅಂಗವಿಕಲರಾಗಿದ್ದಾರೆ ಎಂದರೆ ಸರಿ. ಅಲ್ಲಿಂದ ಇಲ್ಲೀಯವರೆಗೆ ಅವರು ಮನೆಯಲ್ಲಿ ಇದ್ದಾರೆ ಎಂದರೆ ಸರಿ..

**2.** 3ನೇ ಪ್ರತಿವಾದಿಯು ಮದುವೆ ಆಗಿ ಕುಮಟಾದ ನೆಲ್ಲಿಕೇರಿಯಲ್ಲಿ ಇದ್ದರು ಎಂದರೆ ಸರಿ. ದಾವಾ ಸರ್ವೆ ನಂಬರ 43 ಹಿಸ್ಸಾ 3ಬ ಇದರ ಲಗ್ತ ಸರ್ವೆ ನಂಬರ 43 ಹಿಸ್ಸಾ 5 ಬ ಇದೆ ಎಂದರೆ ಸರಿ. ಸದ್ರಿ ಸರ್ವೆ ನಂಬರ ಆಸ್ತಿಯು ಸದಾನಂದ ಪುಂಡಲಿಕ ಪೈ ಇವರ ಹಕ್ಕು ಕಬ್ಜಾಕ್ಕೆ ಒಳಪಟ್ಟ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು 1982 ರ ತನಕ ಆಗಿತ್ತು ಎಂದು ನುಡಿಯುತ್ತಾರೆ.

**3.** ಸರ್ವೆ ನಂಬರ 43 ಹಿಸ್ಸಾ 3ಬ ಹಾಗೂ ಸರ್ವೆ ನಂಬರ 43 ಹಿಸ್ಸಾ 5 ಬ ಇದರ ನಡುವೆ ಯಜಾವುದೇ ಬೇಲಿ ಪಾಗಾರ ಇಲ್ಲ ಎಂದರೆ ಸರಿ. ಸರ್ವೆ ನಂಬರ 43 ಹಿಸ್ಸಾ 3ಬ ದಲ್ಲಿ ಯವುದೇ ಬಾವಿ ಇಲ್ಲ ಎಂದರೆ ಸರಿ. ಸರ್ವೆ ನಂಬರ 43 ಹಿಸ್ಸಾ 3ಬ ನೇದರ ಮನೆಯಲ್ಲಿ 2ನೇ ಪ್ರತಿವಾದಿ ವಾಸವಾಗಿದ್ದಾರೆ ಎಂದರೆ ಸರಿ. ಸರ್ವೆ ನಂಬರ 43 ಹಿಸ್ಸಾ 5 ಬ ದಲ್ಲಿ ಒಂದು ಬಾವಿ ಇದೆ ಎಂದರೆ ಸರಿ.

**ಮೂ.ದಾ.ನಂ. 68/2014**

ಪಿ.ಡಬ್ಲ್ಯು.1

**4.** ಪ್ರತಿವಾದಿಯರ ತಂದೆ ಅನಂತ ಗಣಪಯ್ಯ ಶಾನಭಾಗ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ಸರ್ವೆ ನಂಬರ 43 ಹಿಸ್ಸಾ 5 00-02-02 ಆಣೆಗೆ ಸಂಬಂಧಿಸಿದಂತೆ ದಿಃ 18/11/1982 ರಲ್ಲಿ ಮಾರಾಟಕ್ಕೆ ಸಂಬಂಧಿಸಿದಂತೆ ಕರಾರು ಆಗಿರುತ್ತದೆ ಎಂದರೆ ಸರಿ. ಅನಂತ ಗಣಪಯ್ಯ ಶಾನಭಾಗ ಇವರು ದಿಃ 11/12/1982 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ನಂತರ ಸದಾನಂದ ಪುಂಡಲೀಕ ಪೈ ರವರು ಸದ್ರಿ ಜಾಗವನ್ನು ಬಿನ್ ಶೇತ್ಕಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ತಾಯಿ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಸದ್ರಿ ಬಿನ್ ಶೇತ್ಕಿ ಆಗಿರುವುದು ದಿಃ 06/08/2011 ಎಂದರೆ ಸರಿ. ಸದ್ರಿ ಜಾಗವನ್ನು ನನ್ನ ತಾಯಿ ದಿಃ 23/04/2012 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಕಾಲಕ್ಕೆ ಮೃತ ಅನಂತ ಗಣಪಯ್ಯ ಶಾನಭಾಗ ಇವರ ಸರಳು ವಾರಿಸುದಾರರ ಅನುಮತಿಯನ್ನು ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಯಲ್ಲಿ ಅನಂತ ಗಣಪಯ್ಯ ಶಾನಭಾಗ ಇವರ ಹೆಸರು ಇರದೇ ಸದಾನಂದ ಪುಂಡಲೀಕ ಪೈ ವಾರಿಸುದಾರರ ಹೆಸರು ಇದ್ದು ಅವರ ಬಳಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ.

**5.** ಸದಾನಂದ ಪುಂಡಲೀಕ ಪೈ ಹಾಗೂ ನನ್ನ ತಾಯಿಯ ನಡುವೆ ಸದ್ರಿ ಆಸ್ತಿಯನ್ನು ಮಾರಾಟ ಮಾಡುವ ಕುರಿತು ಯಾವುದೇ ಕರಾರು ಆಗಿರುವುದಿಲ್ಲ. ನನ್ನ ತಾಯಿ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ಆದ ಖರೀದಿ ಪತ್ರದಲ್ಲಿ ಹೊಗಳಿಸಿದ ತಹನಾಮೆ ಕರಾರು ಅನಂತ ಗಣಪಯ್ಯ ಶಾನಭಾಗ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ದಿಃ18/11/1982 ರಲ್ಲಿ ಆದ ಕರಾರು ಆಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ 43 ಹಿಸ್ಸಾ 5 ರಲ್ಲಿ ಪ್ರತಿವಾದಿಯರಿಗೂ ಸಹ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದ 1982 ರಲ್ಲಿ ನನ್ನ ಅಜ್ಜನಿಗೆ ಯವುದೇ ಆದಾಯ ಇರದೇ ಇದ್ದು ನನ್ನ

ತಾಯಿಯು ರೂ. 10 ಸಾವಿರ ನೀಡಿ ಬಾಂಡ ರಜಿಸ್ಟರ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಸಂದರ್ಭದಲ್ಲಿ 1 ಹಾಗೂ 2ನೇ ಪ್ರತಿವಾದಿಯರು ನೌಕರಿ ಮಾಡುತ್ತಿದ್ದರು ಎಂದರೆ ಸರಿ.

**6.** ಅನಂತ ಗಣಪಯ್ಯ ಶಾನಭಾಗ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ಕರಾರು ಆಗಿದ್ದರೂ ಸಹ ಅನಂತ ಗಣಪಯ್ಯ ಶಾನಭಾಗ ಇವರ ಮರಣ ಹೊಂದಿದ ನಂತರ ಪ್ರತಿವಾದಿಯರಿಗೆ ತಿಳಿಸದೇ ಸದ್ರಿ ಆಸ್ತಿಯನ್ನು ಖರೀದಿಸಿದ್ದೇವೆ ಎಂದರೆ ಸರಿಯಲ್ಲ. ಖರೀದ ಆದ ನಂತರ ಸದ್ರಿ ಕ್ರಯ ದಸ್ತಾವೇಜಿನಂತೆ M.R. ದಾಖಲಿಸುವ ಸಂದರ್ಭದಲ್ಲಿ ಸದಾನಂದ ಪುಂಡಲೀಕ ಪೈ ಇವರ ವಾರಸುದಾರರು ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅವರ ತಕರಾರಿನ ವಿಚಾರಣೆಯನ್ನು ಮಾಡಿ ನಮ್ಮ ಕ್ರಯ ದಸ್ತಾವೇಜಿನಂತೆ ಆದ ಎಂಟ್ರಿಯನ್ನು ರದ್ದುಪಡಿಸಿದ್ದಾರೆ ಎಂದರೆ ಸರಿ. ಈ ಕುರಿತಾಗಿ ನನ್ನ ತಾಯಿಯು ಸಹಾಯಕ ಆಯುಕ್ತರ ನ್ಯಾಯಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದ್ರಿ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ನಮ್ಮ ಮೇಲ್ಮನವಿಯು ವಜಾಗೊಂಡಿರುತ್ತದೆ ಎಂದರೆ ಸರಿ.

7. ನಂತರದಲ್ಲಿ ನನ್ನ ತಾಯಿಯು ಮೂಲ ದಾವಾ ನಂಬರ 67/2014 ನ್ನು ಸದಾನಂದ ಪುಂಡಲೀಕ ಪೈ ಉಲ್ಲಾಸ ಪುಂಡಲೀಕ ಪೈ ಹಾಗಾ ಪ್ರೇಮಾ ರಮಾಕಾಂತ ಶಾನಭಾಗ ಇವರ ವಿರುದ್ಧ ಮಾಡಿದ್ದರು ಎಂದರೆ ಸರಿ. ಸದ್ರಿ ದಾವೆಯು ವಜಾಗೊಂಡಿರುತ್ತದೆ ಎಂದರೆ ಸರಿ. ನಂತರದಲ್ಲಿ ನನ್ನ ತಾಯಿಯು ಮರಣ ಹೊಂದಿರುವುದರಿಂದ ನಾನು ಸಿವಿಲ್ ನ್ಯಾಯಾಧೀಶರು, ಹಿರಿಯ ನ್ಯಾಯಾಲಯದಲ್ಲಿ R.A.No.2/2023 ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದ್ರಿ ಮೇಲ್ಮನವಿಯು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ಭಾಗಶಃ ಪುರಸ್ಕರಿಸಲಾಗಿದೆ ಎಂದು

ನುಡಿಯುತ್ತಾರೆ. ಈ ತೀರ್ಪಿನ ವಿರುದ್ಧ ನಾವು ಮೇಲ್ಮನವಿಯನ್ನು ಸಲ್ಲಿಸಿದ್ದು, ಅದು ವಿಚಾರಣೆಗೆ ಬಾಕಿ ಇರುತ್ತದೆ.

**8.** ಅನಂತ ಗಣಪಯ್ಯ ಶಾನಭಾಗ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ಆದ ಕರಾರಿನ ನಂತರ ಹಾಗೂ ಅನಂತ ಗಣಪಯ್ಯ ಶಾನಭಾಗ ಇವರು ಮರಣ ಹೊದಿದ ನಂತರ 1984 ರಲ್ಲಿ 2ನೇ ಪ್ರತಿವಾದಿಯು ಸರ್ವೆ ನಂಬರ 43 ಹಿಸ್ಸಾ 5 ರಲ್ಲಿ ಸಣ್ಣ ಬಾವಿ 25 ರಿಂದ 30 ಫೂಟು ಆಳ ತೆಗೆಸಿಕೊಂಡು ಅದನ್ನು ಕಲ್ಲು ಕಟ್ಟಿ ಗಡಗಡೆಯನ್ನು (ರಾಟೆ) ಹಾಕಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾಯಿಯ ಅಪ್ಪಣೆಯನ್ನು ಪಡೆದುಕೊಂಡು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಯು 1982 ನೇ ಸಾಲಿನಲ್ಲಿ ಅನಂತ ಗಣಪಯ್ಯ ಶಾನಭಾಗ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ಆದ ಕರಾರಿನಲ್ಲಿ ಬರೆದ ರೂ.10,000-00 ವನ್ನು ನನ್ನ ತಾಯಿಯು ಆ ಸಮಯದಲ್ಲಿ ನೀಡಿರುವುದರಿಂದ ಈ ಮೇಲೆ ಹೇಳಿದ ಪರವಾನಿಗೆಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಕರಾರು ಅನಂತ ಗಣಪಯ್ಯ ಶಾನಭಾಗ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ಆದ ಕರಾರಿನ ಮೂಲ ಪ್ರತಿ ನನ್ನ ಬಳಿ ಇಲ್ಲ. ಸದ್ರಿ ಕರಾರಿನ ಪ್ರತಿ ನನ್ನ ಬಳಿ ಇದ್ದು ನಾನು ಅದನ್ನು ಓದಿ ನೋಡಿರುತ್ತೇನೆ.

**9.** ನನ್ನ ತಾಯಿಯು ರೂ.50,000-00 ವನ್ನು ಸದ್ರಿ ದಾವಾ ಆಸ್ತಿಯ ಆಕಾಲದ ಮೌಲ್ಯವಾಗಿರುವುದರಿಂದ ಅಷ್ಟು ರಕಂನ್ನು ದಸ್ತಾವೇಜಿನಲ್ಲಿ ಕಾಣಿಸಿ ಅದನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ನನ್ನ ತಾಯಿಯು ನಂತರದಲ್ಲಿ ಪುನಃ ಸದಾನಂದ ಪುಂಡಲೀಕ ಪೈ ಇವರಿಗೆ ರೂ.50,000-00 ಯನ್ನು ನೀಡಿರುತ್ತಾರೆ. ಅನಂತ ಗಣಪಯ್ಯ ಶಾನಭಾಗ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ಆದ ಕರಾರಿನ ಸಮಯದಲ್ಲಿ ನನ್ನ ತಾಯಿಯು ನಗದಾಗಿ ರೂ.10,000-00 ವನ್ನು ನೀಡಿರುತ್ತಾಳೆ. ನನ್ನ ತಾಯಿಯು ಈ ರೀತಿಯಾಗಿ ಹಣ ನೀಡಿದ ಬಗ್ಗೆ

**ಮೂ.ದಾ.ನಂ. 68/2014**

ಪಿ.ಡಬ್ಲ್ಯು.1

ದಾಖಲಾತಿ ಇದೆ. ಸದ್ರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಅನಂತ ಗಣಪಯ್ಯ ಶಾನಭಾಗ ಹಾಗೂ ಸದಾನಂದ ಪುಂಡಲೀಕ ಪೈ ಇವರ ನಡುವೆ ಆದ ಕರಾರಿನ ಸಂದರ್ಭದಲ್ಲಿ ನನ್ನ ತಾಯಿಯು ರೂ.10,000-00 ವನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಪ್ರತಿವಾದಿಯರ ಎಲ್ಲರ ಪರವಾಗಿ ಸದ್ರಿ ಆಸ್ತಿಯನ್ನು ಖರೀದಿ ಮಾಡಿರುವುದರಿಂದ ಅದರಲ್ಲಿ ಎಲ್ಲರಿಗೂ ಪಾಲು ಇದೆ ಎಂದರೆ ಸರಿಯಲ್ಲ. ಅದರಲ್ಲಿ ಪ್ರತಿವಾದಿಯರಿಗೂ ಸಹ ಪಾಲು ಇದೆ ಎಂದರೆ ಸರಿಯಲ್ಲ. ಸದ್ರಿ ಅಸ್ತಿಯೂ ಸಹ ಪಿರ್ತಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ